ತಯಾರಾಗುತ್ತಿದ್ದ. ನಲ್ಲತಂಬಿ ಇನ್ನೂ ಬಾರದ ಪ್ರಯಾಣಿಕರಿಗೆ ಕರೆ ಮಾಡುತ್ತಿದ್ದ. ಪ್ರತೀ ಬಾರಿ ಇದೇ ಬಸ್ಸಿಗೆ ಬಂದೂ ಬಂದೂ ಮುಖ ಪರಿಚಯವಾಗಿರುವ ಹುಡುಗನೊಬ್ಬ 'ಹ್ಯಾಪೀ ದೀಪಾವಳಿ. ಸ್ವೀಟ್ ತಗೊಳ್ಳಿ' ಎಂದು ತನಗೆ ಆಫೀಸಿನಲ್ಲಿ ಕೊಟ್ಟ ಸ್ವೀಟ್ ಬಾಕ್ಸಿನ ಮೈಸೂರು ಪಾಕುಗಳನ್ನು ನಲ್ಲತಂಬಿ ಹಾಗೂ ಜಬ್ಬರನ ಮುಂದೆ ಹಿಡಿದ. ಅದರೊಳಗಿನ ಪಾಕುಗಳ ಪೈಕಿ ಎರಡನ್ನು ಎತ್ತಿಕೊಂಡ ತಂಬಿ, 'ಅರೆ, ಜಬ್ಬರಣ್ಣ ಸಾಹೇಬ್ರು. ಅವ್ರಿಗೆ ಮೈಸೂರ್ ಪಾಕು ಬೇಡ. ಅದ್ಕೇ ಅವ್ರ ಪಾಲನ್ನೂ ನಾನೇ ತಗೋತೀನಿ... ಹೇಹೇ ಓಕೆ ನಾ ಜಬ್ಬರಣ್ಣ?' ಎಂದು ಕಿಸಿಕಿಸಿ ನಕ್ಕ. ಅದಕ್ಕೆ ತಲೆಯೇ ಕೆಡಿಸಿಕೊಳ್ಳದ ಆ ಹುಡುಗ 'ಪರ್ವಾಗಿಲ್ಲ ಜಬ್ಬಣ್ಣ, ನೆಕ್ಸ್ಟ್ ಬರೋ ನಿಮ್ಮ ಹಬ್ಬ ಯಾವ್ದು? ರಂಜಾನ್ನಾ, ಮೊಹರಮ್ಮಾ? ಅದ್ರದ್ದೇ ಸ್ವೀಟು ಅಂದ್ಕೊಂಡು ತಿಂದ್ಬಿಡಿ' ಎನ್ನುತ್ತಾ ಎರಡು ಮೈಸೂರುಪಾಕುಗಳನ್ನು ತಾನೇ ತೆಗೆದು ಜಬ್ಬರನ ಕೈಗಿಟ್ಟು ಮುಂದಕ್ಕೆ ನಡೆದೇ ಬಿಟ್ಟ. ಅವನ ಬಾಯಲ್ಲಿ ಸರಾಗವಾಗಿ ಬಂದ ಜಬ್ಬಣ್ಣ ಪದ ಮೈಸೂರುಪಾಕದಷ್ಟೇ ಸವಿಯಾಗಿತ್ತು. ಆ ಪದದ ಮುಖಾಂತರ ತೀರಿ ಹೋದ ಅರವಿಂದ ಅರೆಕ್ಷಣದ ಮಟ್ಟಿಗೆ ಮತ್ತೆ ಜೀವಂತವಾದಂತೆನಿಸಿತು. 'ಯಾಕೋ ಸಾಲೇ, ಈದ್ ಗೆ ಭಾಭಿ ಕೊಟ್ಟ ಬಿರಿಯಾನಿನ ತಿಂದು ತೇಗುವಾಗ ನಾನು ಸಾಹೇಬ ಅನ್ನೋದು ನಿಂಗೆ ಮರ್ತು ಹೋಗಿರತ್ತಾ?' ಎಂದು ತಂಬಿಯ ಸಣಕಲು ಹೊಟ್ಟೆಯನ್ನು ಜಬ್ಬರ್ ಬಲವಾಗಿ ಚೂಟಿದ. ಯಪ್ಪಾ ಎಂದು ಹಿಂದಕ್ಕೆ ನೆಗೆದ ತಂಬಿ 'ವೋ ಸಪ್ರೇಟ್, ಯೇಸಪ್ರೇಟ್. ಡೀಟೈಲ್ ಬಾದ್ಮೇ ಬಾತ್ ಕರ್ತಾಸೋ' ಎನ್ನುತ್ತಾ ಬಸ್ಸಿಳಿದು ಓಡಿಹೋದ.

ಬರಬೇಕಾದವರೆಲ್ಲ ಬಂದು ಬಸ್ಸು ಹೊರಟಿತು. ಕಟ್ಟಿ ನಿಂತ ಟ್ರಾಫಿಕ್ಕಿನ ನಡುವೆ ಶಿವಶಕ್ತಿ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ಸಾಗುತ್ತಿತ್ತು. ನವರಂಗ್, ಜಾಲಹಳ್ಳಿಗಳ ನಿಲ್ದಾಣಗಳಲ್ಲಿ ನಿಂತ ಜನ ತಂತಮ್ಮ ಬಸ್ಸುಗಳಿಗಾಗಿ ಅಭಿಸಾರಿಕೆಯರಂತೆ ಕಾದು ನಿಂತಿದ್ದರು. ನವರಂಗ್ ನಲ್ಲಿ ಅವರ ನಡುವಿನಿಂದ ಓಡಿ ಬಂದವನೊಬ್ಬ 'ಬೀಜಾಪುರ್ ಹೋಗ್ತೈತೇನ್ರೀ? ಸೀಟೈತೇನ್ರೀ?' ಎಂದು ಉದ್ವೇಗದಲ್ಲಿ ಕೇಳಿದ. ನೋಡಲಿಕ್ಕೆ ಹೆಚ್ಚೂ ಕಡಿಮೆ ಅರವಿಂದನಂತೇ ಇದ್ದ ಅವನ ಕಣ್ಣಿನಲ್ಲಿದ್ದ ಅಮಾಯಾಕತೆಯನ್ನು ನೋಡಿದ ಜಬ್ಬರನಿಗೆ ಅರೆಕ್ಷಣ ಬಸ್ಸನ್ನು ಬೀಜಾಪುರಕ್ಕೇ ಕೊಂಡೊಯ್ಯಬೇಕು ಅನ್ನಿಸಿತು. 'ಹಿಂದೆ ಗವರ್ಮೆಂಟಿನ ಕೆಂಪು ಗಾಡಿಗಳು ಬರ್ತಾವೆ. ಸ್ವಲ್ಪ ಕಾಯ್ರಿ. ಖಾಲಿ ಬಸ್ಸು ಸಿಗತ್ತೆ' ಎಂದ. ಅವನ ಮಾತಿಗೆ ನಿರಾಶನಾದ ಆ ಹುಡುಗ 'ಅಯ್ಯೋ ದೇವ್ರೇ' ಎನ್ನುತ್ತಾ ಹಿಂದೆ ಸರಿದು ಮತ್ತದೇ ಸಂದಣಿಯೊಳಗೆ ತೂರಿಕೊಂಡ.

ಅವನು ಹಿಂದೆ ಹೋದ ಮೇಲೂ ಅವನ ಆ 'ಅಯ್ಯೋ ದೇವ್ರೇ' ಮಾತ್ರ ಬಸ್ಸೊಳಗೇ ಉಳಿದುಹೋಗಿರುವಂತೆನಿಸಿ ಜಬ್ಬರ್ ಬೆಚ್ಚಿದ. ಪಾಪದ ಖುದಾ. ಅವನೆದುರಲ್ಲಿ ಒಂದೊಂದು ಕ್ಷಣಕ್ಕೂ ಅದೆಷ್ಟೊಂದು ಪ್ರಾರ್ಥನೆಗಳೋ? ಪ್ರತಿ ನಿಮಿಷಕ್ಕೂ ಅದೆಷ್ಟು ಮೊಕದ್ದಮೆಗಳೋ? ಬಸ್ಸು ಸಿಗಲಿ, ಸೀಟು ದೊರೆಯಲಿ, ಬೇಗ ಊರು ಸೇರಲಿ, ದೀಪಾವಳಿಯ ನಕ್ಷತ್ರ ಕಡ್ಡಿ ಚೆನ್ನಾಗಿ ಉರಿಯಲಿ, ರೈಲಿನ ವೇಯ್ಟಿಂಗ್ ಲೀಸ್ಟ್ ಬೇಗ ಮುಗಿಯಲಿ.. ಇನ್ನೂ ಅದೇನೇನು ಪ್ರಾರ್ಥನೆಗಳೋ? ಇವೆಲ್ಲದರ ನಡುವೆ ಆ ತೆಳ್ಳ ದೇಹದ, ಜೋರು ಬಾಯಿಯ ಹುಡುಗ.. ಅರವಿಂದ.. ಅವನ ಪ್ರಾರ್ಥನೆಯೇನಿತ್ತು? ಅದು ಫಲಿಸಿತಾ? ಅಥವಾ ಪ್ರಾರ್ಥನೆಗಳೇ ಇಲ್ಲದೆ ಅವನು ಹೊರಟುಹೋದನಾ?

ಮುಗಿಯದ ಯೋಚನೆಗಳೊಳಗೆ ಮುಳುಗಿಹೋದ ಜಬ್ಬರ್. ಬಸ್ಸು ಜಾಲಹಳ್ಳಿಯ ಸಮೀಪ ಕುಂಟುತ್ತಾ ಸಾಗುತ್ತಿತ್ತು. ಆಗ, ರಸ್ತೆಯಾಚೆಗಿನ ಪಾದಚಾರಿ ಮಾರ್ಗದಲ್ಲಿ ಥಟ್ಟನೆ ಕಂಡಳು.. ಆದಿನ ಅರವಿಂದ ಕರೆದು ತಂದು "ಮೇರಾ ಫರಿಂದಾ" ಎಂದು ಪರಿಚಯಿಸಿದ್ದ ಹುಡುಗಿ! ಅದೇ ಮುಖ, ಅದೇ ನಗು... ಆದರೆ ಹೆಗಲ ಮೇಲೆ ಕೈ ಹಾಕಿ ನಡೆಯುತ್ತಿರುವ ಹುಡುಗ ಮಾತ್ರ ಬೇರೆ! ಕದಡಿಹೋದ ಜಬ್ಬರ್. ಇಷ್ಟೇನೇ ಪ್ರೀತಿಯೆಂದರೆ? ಮೋಹ, ಸೆಳೆತ, ಅನುಬಂಧಗಳೆಂದರೆ? ಅದು ಒಬ್ಬ ಕ್ಲೀನರ್ ಎದ್ದು ಹೋದ ಜಾಗಕ್ಕೆ ಇನ್ನೊಬ್ಬ ಬಂದು ಕೂರುವಷ್ಟೇ ಸಲೀಸೇ?

ಟ್ರಾಫಿಕ್ಕು ಚಲಿಸತೊಡಗಿತು. ಬಸ್ಸು ಎಂಟನೇ ಮೈಲಿಯ ಬಳಿ ಮುಂದಕ್ಕೋಡುತ್ತಿತ್ತು. ಸಣ್ಣಗೆ ಕಂಪಿಸುತ್ತಿದ್ದ ಜಬ್ಬರ್. ಅದೇಕೋ ಇದು ಬಸ್ಸಿನ ಕುಲುಕಾಟದಿಂದುಂಟಾಗಿರುವ ಕಂಪನವಲ್ಲ ಎಂದವನಿಗೆ ಬಲವಾಗಿ ಅನ್ನಿಸುತ್ತಿತ್ತು. ಅಷ್ಟರಲ್ಲೇ ಎಂಟನೇ ಮೈಲಿಯ ಖಾಲಿ ಸೈಟೊಂದರ ಸಮೀಪ